'ಸಮನ್ವಯ ತರಗತಿ'ಗಳಿಗೆ ಶಿಕ್ಷಕರನ್ನು ಸಜ್ಜುಗೊಳಿಸುವುದು

ರಾಜಶ್ರೀ ಶ್ರೀನಿವಾಸನ್

ನಮ್ಮ ದೇಶದಲ್ಲಿ ಎಲ್ಲರಿಗೂ ಸಮಾನ ಗುಣಮಟ್ಟದ ಶಿಕ್ಷಣ ದೊರಕತಕ್ಕದ್ದೆಂದು ಕಾನೂನು ಅವಕಾಶ ಕಲ್ಪಿಸಿದೆಯಾದರೂ, ವಾಸ್ತವ ಪರಿಸ್ಥಿತಿ ಅಸಮಾನ ಪ್ರವೇಶಾವಕಾಶ ಮತ್ತು ಕಳಪೆ ಶೈಕ್ಷಣಿಕ ಫಲಿತಾಂಶಗಳ ನಿದರ್ಶನಗಳಿಂದಲೇ ತುಂಬಿಹೋಗಿದೆ. ನಮ್ಮ ವ್ಯವಸ್ಥೆಯಲ್ಲಿ ಅಸಮರ್ಥತೆ, ಬಡತನ ಹಾಗೂ ಸಾಮಾಜಿಕ ಬಹಿಷ್ಕಾರಗಳ ಪರಿಣಾಮಗಳಿಂದ ನರಳುತ್ತಿರುವ ಮಕ್ಕಳು ಅಪಾರ ಸಂಖ್ಯೆಯಲ್ಲಿದ್ದಾರೆ. ಶಾಲಾವ್ಯವಸ್ಥೆಯಲ್ಲಿ ಶೈಕ್ಷಣಿಕ ಸಾಧನೆ ಎಂಬುದು ಮಕ್ಕಳಿಗೆ ಅದರಲ್ಲೂ, ಕುಟುಂಬದಲ್ಲಿ ತಾವೇ ಮೊದಲ ಬಾರಿಗೆ ಶಾಲೆಯ ಮೆಟ್ಟಿಲು ಹತ್ತುತ್ತಿರುವ ಮಕ್ಕಳಿಗೆ ಮರೀಚಿಕೆಯಾಗಿದೆ, ಈ ಶಾಲೆಗಳ ಶಿಕ್ಷಕರ ಕಷ್ಟವಂತೂ ಹೇಳತೀರದು. ಇಂತಹ ಮಕ್ಕಳಿಗೆ ಮನೆಯಲ್ಲಿ ಯಾವುದೇ ಶೈಕ್ಷಣಿಕ ನೆರವು ದೊರೆಯದೇ ಇರುವುದರಿಂದ, ಶಿಕ್ಷಕರು ಈ ಮಕ್ಕಳ ಎಲ್ಲಾ ಶೈಕ್ಷಣಿಕ ಕಲಿಕೆಯು ಶಾಲೆಯೊಳಗೇ ಆಗುವಂತೆ ನೋಡಿ-ಕೊಳ್ಳಬೇಕು. ಈ ಮಕ್ಕಳ ಬದುಕಿನ ಸನ್ನಿವೇಶಗಳು ಅದೆಷ್ಟು ಸೂಕ್ಷ್ಮವಾಗಿರುತ್ತವೆ ಎಂದರೆ ಅವರ ಜೀವನವು ನಿರಂತರವಾಗಿ ಅನಿಶ್ಚಿತತೆ ಹಾಗೂ ಸಂದಿಗ್ಧತೆಗಳಲ್ಲಿ ಸಿಲುಕಿರುವುದರಿಂದ ಮಕ್ಕಳು ತಮ್ಮ ಕೌಟುಂಬಿಕ, ಸಾಂಸ್ಕೃತಿಕ, ಇಲ್ಲವೇ ಸಮಾಜೋ-ಆರ್ಥಿಕ ಕಾರಣಗಳಿಂದಾಗಿ ಮಾರನೇ ದಿನ ಶಾಲೆಗೆ ಹಾಜರಾಗುತ್ತಾರೋ, ಇಲ್ಲವೋ ಎಂಬುದೂ ಶಿಕ್ಷಕರಿಗೆ ತಿಳಿಯದಂತಹ ಪರಿಸ್ಥಿತಿಯಿರುತ್ತದೆ. 'ಎಲ್ಲಾ ಮಕ್ಕಳೂ ಕಲಿಯಲು, ಶೈಕ್ಷಣಿಕವಾಗಿ ಸಾಧನೆಗೈಯಲು ಸಮರ್ಥರಿರುತ್ತಾರೆ ಎಂದು ಸತತವಾಗಿ ನಂಬುವ ಶಿಕ್ಷಕರು ಹಾಗೂ ಸರ್ವತೋಮುಖ ಬೆಂಬಲ ನೀಡುವ ಒಂದು ವ್ಯವಸ್ಥೆಯ ಅಗತ್ಯ ಈ ಮಕ್ಕಳಿಗೆ ಇದೆ. ಬಡತನವಾಗಲೀ, ಜಾತಿ, ಧರ್ಮಗಳೇ ಆಗಲಿ ಮತ್ತು ಇನ್ನಾವುದೇ ಸಾಮಾಜಿಕ ಭಿನ್ನತೆಗಳೇ ಆಗಲಿ, ಬುದ್ಧಿಶಕ್ತಿ ಅಥವಾ ವಿಚಾರಣಾ ಸಾಮರ್ಥ್ಯಗಳನ್ನು ರೂಪಿಸಲು ಕಾರಣವಾಗುವುದಿಲ್ಲ ಎಂಬ ನಂಬಿಕೆಯೇ ಶಾಲಾಶಿಕ್ಷಣದ ತತ್ತ್ವ ಹಾಗೂ ಅದರ ಆಚರಣೆಯ ಪ್ರಧಾನ ಅಂಗವಾಗಿರಬೇಕು.

ಶಾಲಾ ಶಿಕ್ಷಣ ಹಾಗೂ "ಶಿಕ್ಷಕರ ಶಿಕ್ಷಣ"ದ ವಿಚಾರವಾಗಿ ಕಳೆದ ದಶಕದಲ್ಲಿ ನಡೆದ ಪಠ್ಯಕ್ರಮ ಸಂವಾದಗಳ ಗಮನವೆಲ್ಲಾ ಕಲಿಕಾರ್ಥಿಗಳ ನಡುವಿನ ವೈವಿಧ್ಯದಿಂದ ತಲೆದೋರುವ ಸಮಸ್ಯೆಗಳ ಕಡೆಗೆ ಹಾಗು ಮಕ್ಕಳು ಕಲಿಯುವಂತೆ ನೋಡಿಕೊಳ್ಳಲು ಶಿಕ್ಷಕರನ್ನು ಸಮರ್ಥರನ್ನಾಗಿಸುವಂತಹ ಶಿಕ್ಷಕರ ತರಬೇತಿಯ ಕಡೆಗೇ ಹರಿದಿದೆ. 2019ರ ಕರಡು ರಾಷ್ಟ್ರೀಯ ಶಿಕ್ಷಣನೀತಿಯ ಆರನೇ ಅಧ್ಯಾಯವು (ನಿಷ್ಪಕ್ಷಪಾತ ಮತ್ತು ಸಮನ್ವಯ ಶಿಕ್ಷಣ) ಎಲ್ಲಾ ಮಕ್ಕಳಿಗೂ ಕಲಿಯಲು, ಕಲಿತು ಏಳಿಗೆ ಹೊಂದಲು ಸಮಾನ ಅವಕಾಶಗಳು ಇರುವಂತಹ ಸಮನ್ವಯ ಹಾಗೂ ನಿಷ್ಪಕ್ಷಪಾತ ವ್ಯವಸ್ಥೆಯ ಸಾಧನೆಯೇ ತನ್ನ ಗುರಿ ಎಂದು ವಿಶದಪಡಿಸುತ್ತದೆ. ಈ ಗುರಿಯ ಸಾಧನೆಗಾಗಿ ಅದು ಸಮನ್ವಯ ಶಿಕ್ಷಣವನ್ನು ಸೇವಾಪೂರ್ವ ಶಿಕ್ಷಕರ ಶಿಕ್ಷಣದ ಹಾಗೂ ಸೇವಾ ನಿರತ ಶಿಕ್ಷಕರ ವೃತ್ತಿ ಕ್ಷೇತ್ರದ ಬೆಳವಣಿಗೆಯ ಅವಿಭಾಜ್ಯ ಅಂಗವನ್ನಾಗಿ ಮಾಡುವ ಉದ್ದೇಶವನ್ನು ವ್ಯಕ್ತಪಡಿಸುತ್ತದೆ. "..ಈ ಕಾರ್ಯಕ್ರಮಗಳು ವಿವಿಧ ಬಗೆಯ ವಿದ್ಯಾರ್ಥಿಗಳ ವಿಚಾರವಾಗಿ ಎಲ್ಲಾ ಶಿಕ್ಷಕರನ್ನು ಸಂವೇದನಾಶೀಲರಾಗಿರುವಂತೆ ಮಾಡುವುದನ್ನು ಖಾತರಿ ಪಡಿಸುವುದೇ ಅಲ್ಲದೆ, ಈ ಮೂಲಕ ಎಲ್ಲಾ ವಿದ್ಯಾರ್ಥಿಗಳ, ನಿರ್ದಿಷ್ಟವಾಗಿ ಪ್ರಾತಿನಿಧ್ಯ ದೊರೆಯದ ವರ್ಗಗಳ ಮಕ್ಕಳ, ಶೈಕ್ಷಣಿಕ ಅಗತ್ಯಗಳನ್ನು ಪೂರೈಸಲು ಸಮರ್ಥವಾಗುತ್ತವೆ." (ಪು. 142, ರಾಷ್ಟ್ರೀಯ ಶಿಕ್ಷಣ ನೀತಿಯ ಕರಡು) ಎಂದು ಅಲ್ಲಿ ಹೇಳಲಾಗಿದೆ).

ಬಡವರ ಮಕ್ಕಳನ್ನು ಶಿಕ್ಷಿತರನ್ನಾಗಿ ಮಾಡುವ ವಿಚಾರವಾಗಿ ಶಿಕ್ಷಕರ ದೃಷ್ಟಿಕೋನಗಳು ಯಾವ ರೀತಿ ಇವೆ ಎಂಬುದರ ಬಗ್ಗೆ ಗಮನ ಕೇಂದ್ರೀಕರಿಸುವ ಸಂಶೋಧನಾ ಅಧ್ಯಯನಗಳು, "ಈ ಮಕ್ಕಳು ವಿಷಯ ಗ್ರಹಣಶಕ್ತಿಯ ಕೊರತೆಯಿಂದ ಬಳಲುತ್ತಿದ್ದು, ಕಳಪೆ ಅಧ್ಯಯನದ ವಿಧಾನಗಳನ್ನು ಹೊಂದುತ್ತಿದ್ದಾರೆ" ಎಂಬುದು ಶಿಕ್ಷಕರ ಧೋರಣೆಯಾಗಿರುತ್ತದೆ ಎಂದು ತೋರಿಸುತ್ತವೆ. (Batra, 2015) ಸಾರ್ವಜನಿಕ ಶಿಕ್ಷಣವ್ಯವಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರು ಜಾತಿ, ಧರ್ಮ, ವರ್ಗ ಹಾಗೂ ಇತರ ಸಾಂಸ್ಥಿಕ ಅಥವಾ ಅಧಿಕಾರವರ್ಗದ ಎಲ್ಲೆಕಟ್ಟುಗಳನ್ನು ಮೀರಿನಿಂತು ಮಕ್ಕಳು ಕಲಿತು ತಮ್ಮ ಶಾಲಾಶಿಕ್ಷಣವನ್ನು ಪೂರ್ಣಗೊಳಿಸುವಂತೆ ಮಾಡಿರುವ ಶಿಕ್ಷಕರ ಜೀವನ ಗಾಥೆಯನ್ನು ಬಿಂಬಿಸುವ ವಾಸ್ತವ ವರದಿಗಳೂ ಇವೆ (Azim Premji University, 2019; Giridhar, 2019).

ಈ ಎರಡೂ ಬಗೆಯ ನಿರೂಪಣೆಗಳು ಇದ್ದು, ನಿರ್ಣಾಯಕ ಪ್ರಶ್ನೆ ಎಂದರೆ, ಎಲ್ಲಾ ಮಕ್ಕಳ ಕಲಿಕೆ ಹಾಗೂ ಬೆಳವಣಿಗೆಯನ್ನು ಸುಧಾರಿಸುವ ಗುರಿ ಹೊಂದಿರುವ ಸಮನ್ವಯ ಶಿಕ್ಷಕರ ತರಬೇತಿ ಕಾರ್ಯಕ್ರಮವನ್ನು ಅಭಿವೃದ್ಧಿಗೊಳಿಸುವುದು ಹೇಗೆ? ಯಾವ ಬೋಧನಾ ವಿಧಾನಗಳು ವಿದ್ಯಾರ್ಥಿಗಳಿಗೆ ತಮ್ಮ ನಂಬಿಕೆ ಹಾಗೂ ಅನಿಸಿಕೆಗಳನ್ನು ಅರಿವಿನ ಮೇಲ್ಮೈಗೆ ತರಲು ಸಹಾಯ ನೀಡುತ್ತವೆ?.

ಬೋಧನೆಯ ಕಲಿಕೆ: ಶಿಕ್ಷಕ ಶಿಕ್ಷಣದ ಬೋಧನಾಶಾಸ್ತ್ರ

ಪಾಠ ಮಾಡಲು ಕಲಿಯುವುದು ಒಂದು ಕಗ್ಗಂಟಿನ ವಿಚಾರ. ಇದು ವಿದ್ಯಾರ್ಥಿ ಮತ್ತು ಶಿಕ್ಷಕರ ಹಾಗೂ ಅವರ ಭಾವೀ ವೃತ್ತಿಗೂ ಇರುವ ಸಂಪರ್ಕದ ಮೊದಲ ಹಂತ. ಸೇವಾಪೂರ್ವ ಶಿಕ್ಷಕರ ಶಿಕ್ಷಣದ ಗುರಿಯಲ್ಲಿ ತಾವು ಆಯ್ಕೆ ಮಾಡಿಕೊಳ್ಳುವ ವಿಷಯವಸ್ತುವಿನ ಹಾಗೂ ಶಿಕ್ಷಣ ಶಾಸ್ತ್ರದ ಜ್ಞಾನಸಂಪಾದನೆ, ವಿದ್ಯಾರ್ಥಿಗಳ ಹಿನ್ನೆಲೆ ಮತ್ತು ಕಲಿಕಾ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳುವುದು, ಶಾಲಾ ಸನ್ನಿವೇಶಗಳಲ್ಲಿ ಮಕ್ಕಳೊಡನೆ ಮತ್ತು ಇತರ ಶಿಕ್ಷಕರೊಡನೆ ಕೆಲಸಮಾಡಲು ಬೇಕಿರುವ ಸಾಮಾಜಿಕ ಹಾಗು ನೈತಿಕ ಮನೋ-ಧರ್ಮಗಳನ್ನು ಬೆಳೆಸಿಕೊಳ್ಳುವುದು, ಯೋಜನೆ, ಬೋಧನಕಲೆ ಮತ್ತು ಮೌಲ್ಯಮಾಪನಗಳ ಬಗೆಗಿನ ದೃಷ್ಟಿಕೋನಗಳ ಪ್ರಾರಂಭಿಕ ಸಂಚಯವನ್ನು ತಮ್ಮದಾಗಿಸಿಕೊಳ್ಳುವುದೂ ಸೇರಿರುತ್ತವೆ. ಶಿಕ್ಷಕರ ಶಿಕ್ಷಣದ ಬೋಧನಾ ಶಾಸ್ತ್ರವು, ಸಿದ್ಧಾಂತ, ಆಚರಣೆ ಮತ್ತು ವಿಚಾರಣೆಗಳು ಒಂದರೊಳಗೊಂದು ಹಾಸುಹೊಕ್ಕಾಗಿದ್ದು, ಶೈಕ್ಷಣಿಕ ಪ್ರಕ್ರಿಯೆಯ ಒಂದು ಸಮೃದ್ಧ ಪರಿಕಲ್ಪನೆಯನ್ನು ರೂಪಿಸಿಕೊಳ್ಳಲು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಜ್ಞಾನವನ್ನು ಬೆಳೆಸಿಕೊಳ್ಳುವುದು ಅತ್ಯವಶ್ಯಕ ಎಂಬ ಆಧಾರದ ಮೇಲೆ ನಿಂತಿದೆ.

ತಾವು ಒಡನಾಡಬೇಕಾಗಿರುವ ವಿದ್ಯಾರ್ಥಿಗಳ ಹಿನ್ನೆಲೆ, ಅವರ ಬಾಲ್ಯದ ಅನುಭವಗಳು ಮತ್ತು ಕಲಿಕೆಯ ಬಗ್ಗೆ ತಮ್ಮದೇ ಆದ ಪೂರ್ವ–ಕಲ್ಪನೆಗಳು ಹಾಗೂ ನಂಬಿಕೆಗಳ ಮಹಾಪೂರದೊಂದಿಗೆ ವಿದ್ಯಾರ್ಥಿ ಶಿಕ್ಷಕರು ತಮ್ಮ ಕಲಿಕಾ ಕಾರ್ಯಕ್ರಮವನ್ನು ಪ್ರವೇಶಿಸುತ್ತಾರೆ. ಅವರಿಗೆ ತಮ್ಮ ಭಾವನೆಗಳ ಬಗ್ಗೆ ಚಿಂತನೆ ನಡೆಸಲು, ಅವುಗಳನ್ನು ಅಭಿವ್ಯಕ್ತಿಗೊಳಿಸಲು ಅವಕಾಶ ನೀಡುವುದು ಆವಶ್ಯಕ. ಅನಿಸಿಕೆಗಳು ವ್ಯಕ್ತಿಯ ನಡವಳಿಕೆಯನ್ನು ರೂಪಿಸುತ್ತವೆ. ಇಂಥ ಪೂರ್ವ–ಕಲ್ಪನೆಗಳನ್ನು ಪರೀಕ್ಷೆಗೆ ಒಡ್ಡುವುದರ ಮೂಲಕ ಹೊಸ ಜ್ಞಾನವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆ ಆರಂಭವಾಗುತ್ತದೆ. ಫೈಮನ್–ನೆಮ್ಸರ್ ಮತ್ತು ಬುಕ್‌ಮನ್ (1986) ಅವರು, ''ಬೋಧಿಸಲು ಕಲಿಯುವ ಪ್ರಕ್ರಿಯೆಯಲ್ಲಿ ಖುದ್ದಾಗಿ ಕಲಿತ ಅನುಭವವಾಗಲೀ, ವಿಶ್ವವಿದ್ಯಾಲಯಗಳ ಶಿಕ್ಷಣವಾಗಲೀ ತಮ್ಮಷ್ಟಕ್ಕೆ ತಾವೇ ಕೆಲಸ ಮಾಡಲು ಬಿಡಲಾಗದು. ತಮ್ಮ ಪ್ರಸ್ತುತ ನಂಬಿಕೆಗಳು ಹಾಗೂ ಕಲ್ಪನೆಗಳನ್ನು ಪರಿಶೀಲಿಸಲು ಸಹಾಯ ನೀಡದೆ ಇದ್ದರೆ ಶಿಕ್ಷಕ ಅಭ್ಯರ್ಥಿಗಳು ತಮ್ಮ ಸಾಂಪ್ರದಾಯಿಕ ನಂಬಿಕೆಗಳನ್ನು ಮುಂದುವರಿಸಿಕೊಂಡು ಹೋಗುವ ಮತ್ತು ತಮಗೆ ದೊರೆಯುವ ನೂತನ ಮಾಹಿತಿಯನ್ನೋ, ತಬ್ಬಿಬ್ಬುಗೊಳಿಸುವ ಅನುಭವಗಳನ್ನೋ ಹಳೆಯ ಚೌಕಟ್ಟುಗಳೊಳಗೆ ಅಳವಡಿಸಿಕೊಳ್ಳುವ ಸಾಧ್ಯತೆಗಳಿರುತ್ತವೆ'' ಎಂದಿದ್ದಾರೆ (ಪು. 255).

''ಮಗುವಿನ ಬೆಳವಣಿಗೆ ಹಾಗೂ ಕಲಿಕೆ'' ಎಂಬ ಒಂದು ವಿಷಯವಾಗಿ ನಾನು ಮಾಡಿದ ಪಾಠದ ಅನುಭವದಿಂದ ಇಲ್ಲಿ ವಿವರಿಸಿರುವ ಬೋಧನಾ ವಿಧಾನಗಳು ಹೊರಹೊಮ್ಮಿದ್ದು, ಇದರಲ್ಲಿ ಬಾಲ್ಯ, ಮಕ್ಕಳು, ಕಲಿಕೆ ಮತ್ತು ಬೋಧನೆಗಳ ವಿಚಾರವಾಗಿ ಇರುವ ಎಲ್ಲಾ ಪೂರ್ವಕಲ್ಪನೆಗಳಿಗೆ ಸವಾಲು ಒಡ್ಡಲು ಸರ್ವ ಪ್ರಯತ್ನವನ್ನೂ ಮಾಡಲಾಗಿದೆ.

ವಾಚಿಕೆಗಳು ಮತ್ತು ಸಂವಾದಗಳ ಮೂಲಕ ಕಲ್ಪನೆಗಳಿಗೆ ಸವಾಲೊಡ್ಡುವುದು

ಈ ಕೋರ್ಸುಗಳಿಗಾಗಿ ಮಾಡಿದ ಲೇಖನಗಳ ಆಯ್ಕೆಯು ವಿದ್ಯಾರ್ಥಿಗಳು ತಮ್ಮ ಪೂರ್ವಅನಿಸಿಕೆಗಳನ್ನು ಪರಿಶೀಲಿಸಲು ಸವಾಲೊಡ್ಡುವ ಒಂದು ಉತ್ತಮ ಆಕರವಾಗಿರುತ್ತವೆ. ಲೇಖನಗಳನ್ನು ಓದುವ ಹಂತದಲ್ಲಿ ಬಾಲ್ಯ, ಜಾತಿ, ಲಿಂಗ, ಅಸಮರ್ಥತೆ, ಬಡತನ ಇತ್ಯಾದಿಗಳ ಬಗ್ಗೆ ಚಿಂತನೆಗೆ, ಚರ್ಚೆಗೆ ಮತ್ತು ಪರ್ಯಾಯ ದೃಷ್ಟಿಕೋನಗಳನ್ನು ಪರಿಗಣಿಸುವುದಕ್ಕೆ ಅವಕಾಶಗಳನ್ನು ಕಲ್ಪಿಸಿಕೊಟ್ಟು ಅವರಿಗೆ ಬೆಂಬಲ ನೀಡಬೇಕಾದ ಅಗತ್ಯವಿದೆ. ಮೊದಲ ಕೆಲವು ತರಗತಿಗಳಲ್ಲಿ, 'ಯಾರನ್ನು ಮಗು ಎನ್ನಬಹುದು?' ಬಾಲ್ಯದ ಅರ್ಥವೇನು? ಅದೊಂದು ಏಕಾತ್ಮಕ ಪರಿಕಲ್ಪನೆಯೆ? ಎಲ್ಲ ಮಕ್ಕಳು ತಮ್ಮ ಬಾಲ್ಯವನ್ನು ಒಂದೇ ರೀತಿ ಅನುಭವಿಸುತ್ತಾರೆಯೆ? ಎಂಬುದರ ಬಗ್ಗೆಯೇ ನಮ್ಮೆಲ್ಲ ಗಮನವನ್ನು ಕೇಂದ್ರೀಕರಿಸಿ ಚರ್ಚೆಗಳು ನಡೆಯುತ್ತವೆ. ನಿರ್ದಿಷ್ಟವಾಗಿ ಬಡತನ, ಬಾಲ್ಯ ಮತ್ತು ಕಲಿಕೆಯ ವಿಚಾರಗಳನ್ನು ಒಳಗೊಂಡ ಚರ್ಚೆಯನ್ನು ನಾನು ಹಮ್ಮಿಕೊಳ್ಳುತ್ತೇನೆ.

ಬೀದಿಯಲ್ಲಿರುವ ಮಕ್ಕಳು, ಸಾಂಸ್ಥಿಕ ಗೃಹಗಳ, ಸಂಘರ್ಷದ ವಲಯಗಳ ಮತ್ತು ಗುಡ್ಡಗಾಡು ಪ್ರದೇಶಗಳ ಮಕ್ಕಳ ವಿಚಾರವಾಗಿ ಇರುವ ಬಹಳಷ್ಟು ಸಮಸ್ಯೆಗಳನ್ನು ಕುರಿತು ಚರ್ಚೆಗಳನ್ನು ನಡೆಸಲು ಬಡತನ ಎಂಬುವುದು ಒಂದು ಆಸರೆಗೋಲಷ್ಟೇ. ತಮ್ಮ ಬಾಲ್ಯದ ದಿನಗಳನ್ನು ನೆನಪಿಸುವಂತೆಯೂ, ಅಲ್ಲಿನ ಯಾವ ಅಂಶಗಳು ತಮ್ಮ ಕಲಿಕೆಯನ್ನು ರೂಪಿಸಿದವು ಎಂಬುದರ ಬಗ್ಗೆ ಚಿಂತನೆ ನಡೆಸುವಂತೆಯೂ ತಿಳಿಸುವ ಒಂದು ಕಾಲಕ್ರಮಾನುಗತವಾದ (time-line) ಚಟುವಟಿಕೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಳ್ಳುತ್ತಾರೆ.

ವಿದ್ಯಾರ್ಥಿಗಳಿಗೆ ಓದಲು, ಸುಖದೇವ್ ಥೋರಟ್ ಅವರ, Passage to Adulthood, ಶಾರದಾ ಗೋಪಾಲನ್ ಅವರ ಬಾಲಕಾರ್ಮಿಕ ಸಮಸ್ಯೆಯ ಕುರಿತ Remembering Childhood, ಸಿಂಗ್ ಮತ್ತು ಘಾಯ್ ಅವರ ಲೇಖನ Notions of Self: Lived Realities of Children with Disabilities ನಂತಹ ಪೂರ್ಣ ಲೇಖನಗಳನ್ನೋ ಅಥವಾ ಉದ್ಧೃತ ಭಾಗಗಳನ್ನೋ ನೀಡಲಾಗುತ್ತದೆ. ಸಂಘರ್ಷದ ವಲಯದಲ್ಲಿ ಸಿಲುಕಿರುವ ಪೋಷಕಾಂಶ ಕೊರತೆಯಿಂದ ನರಳುತ್ತಿರುವ ಹಾಗೂ ಬೀದಿಯಲ್ಲಿ ಬೆಳೆಯುವ ಮಕ್ಕಳ ಕುರಿತ ನಿರೂಪಣೆಗಳನ್ನು ವಿದ್ಯಾರ್ಥಿಗಳೊಂದಿಗೆ ಹಂಚಿಕೊಳ್ಳಲಾಗುತ್ತದೆ.

ಈ ನಿರೂಪಣೆಗಳು ಮುದ್ರಿತ ಲೇಖನಗಳ ರೂಪದಲ್ಲೇ ಇರಬೇಕೆಂದೇನೂ ಇಲ್ಲ, ವಿದ್ಯಾರ್ಥಿಗಳು ವಿವಿಧ ಸನ್ನಿವೇಶಗಳಲ್ಲಿನ ಮಕ್ಕಳ ಬಗ್ಗೆ ವಿಡಿಯೋಗಳನ್ನು ನೋಡುತ್ತಾರೆ. ಈ ಲೇಖನಗಳನ್ನು ಓದಿರುವ ವಿದ್ಯಾರ್ಥಿಗಳ ಒಂದು ತಂಡವನ್ನು ಮಾಡಿ, ಅರ್ಥಪೂರ್ಣ ಸಂವಾದಕ್ಕೆ ಎಡೆಮಾಡುವ ನಿರ್ಣಾಯಕ ಪ್ರಶ್ನೆಗಳನ್ನು ಚರ್ಚೆಗಾಗಿ ಅವರಿಗೆ ನೀಡಲಾಗುತ್ತದೆ. ಅವು ತಕ್ಕಮಟ್ಟಿಗೆ ಸಂವಾದಗಳನ್ನು ನಿರ್ದೇಶಿಸಿದರೂ ಕೂಡಾ, ಸ್ವತಂತ್ರ ಚರ್ಚೆಗೆ ಸಾಕಷ್ಟು ಅವಕಾಶವನ್ನೂ ನೀಡುತ್ತವೆ. ಉದಾಹರಣೆಗೆ, ಕೆಲವು ಪ್ರಶ್ನೆಗಳು ಹೀಗಿರುತ್ತವೆ:

ನಮ್ಮ ಸಮಾಜವು ಅಸಮರ್ಥತೆ ಇರುವ ಮಕ್ಕಳನ್ನು / ಬಾಲ ಕಾರ್ಮಿಕರನ್ನು ಹೇಗೆ ಅರ್ಥಮಾಡಿಕೊಳ್ಳುತ್ತದೆ / ಬಿಂಬಿಸುತ್ತದೆ? ಈ ರೀತಿ ಅರ್ಥಮಾಡಿಕೊಳ್ಳುವುದರ ಪರಿಣಾಮ ಏನು? ಈ ಮಕ್ಕಳ ಜೀವನದಲ್ಲಿ ಶಿಕ್ಷಣಕ್ಕೆ ಯಾವ ಸ್ಥಾನವಿದೆ? ಅವರ ಬಾಲ್ಯವನ್ನು ರೂಪಿಸಲು ಪರ್ಯಾಯ ವಿಧಾನಗಳಿವೆಯೇ?

ಒಡಗೂಡಿ (Collaborative) ಸಂವಾದ ನಡೆಸಿದ ಬಳಿಕ ಸಾಮೂಹಿಕ ಪ್ರಕ್ರಿಯೆಯನ್ನು ನಡೆಸಲಾಗುತ್ತದೆ. ಇಲ್ಲಿ ಸಂಪೂರ್ಣ ತರಗತಿಯನ್ನು ಒಟ್ಟಿಗೆ ಸೇರಿಸಿ ತಾವು ಓದಿದ್ದನ್ನು ಸಾರಾಂಶ ರೂಪದಲ್ಲಿ ಹೇಳುವಂತೆಯೂ, ಪ್ರತಿ ತಂಡದಲ್ಲೂ ನಡೆದ ಚರ್ಚೆಗಳನ್ನು ಹಂಚಿಕೊಳ್ಳುವಂತೆಯೂ ಕೇಳಲಾಗುತ್ತದೆ; ಕೆಲವೊಮ್ಮೆ ವೈಯಕ್ತಿಕವಾಗಿಯೂ ತಮ್ಮ ಅನಿಸಿಕೆಗಳನ್ನು ಬರೆದು ಕೊಡಲು ಹೇಳಲಾಗುತ್ತದೆ. ಓದುವಿಕೆಯ ಜೊತೆಗೆ ತರಗತಿಯ ಒಳಗಿನ ಸಂವಾದಗಳು ವಿದ್ಯಾರ್ಥಿಗಳಲ್ಲಿ ಸ್ವ–ಅರಿವು ಮೂಡಿಸುವ ಒಂದು ಅತಿ ಶಕ್ತಿಶಾಲಿ ಮಾಧ್ಯಮವಾಗಿ ಕೆಲಸಮಾಡಿ, ಸಮಾಜದ ನಿರ್ಲಕ್ಷಿತ ವರ್ಗಗಳಿಂದ ಬರುವ ಮಕ್ಕಳ ಹಿನ್ನೆಲೆಗಳನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ.

ವಿದ್ಯಾರ್ಥಿ ಶಿಕ್ಷಕರಿಗೆ ಲಿಂಗ, ಜಾತಿ, ವರ್ಗ, ಭಾಷಾ ವೈವಿಧ್ಯ, ಅಸಮರ್ಥತೆ ಹಾಗೂ ನಿಷ್ಪಕ್ಷಪಾತ ಮತ್ತು ನ್ಯಾಯಗಳಿಗೆ ಸಂಬಂಧ ಪಟ್ಟಂತೆ ಸಮಾಜದಲ್ಲಿ ತಮಗಿರುವ ಸ್ಥಾನಮಾನಗಳ ಬಗ್ಗೆ ಚಿಂತನೆ ನಡೆಸಲು ಉತ್ತೇಜಿಸಲಾಗುತ್ತದೆ. ಇಂತಹ ಸಾಮೂಹಿಕ ಚರ್ಚೆಗಳಲ್ಲಿ ವಿಶಾಲ ಸಾಮಾಜಿಕ ಪ್ರಕ್ರಿಯೆ, ಮಾರುಕಟ್ಟೆ ವಿದ್ಯಮಾನ, ರಾಜಕೀಯ, ಮಾನವ ಹಕ್ಕುಗಳ ಉಲ್ಲಂಘನೆ, ವಿಭಿನ್ನ ನೈತಿಕ ನಿಲುವುಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಉದ್ಭವಿಸುವುದು ಅನಿವಾರ್ಯ. ವಿದ್ಯಾರ್ಥಿಗಳಿಂದ ಬರುವ ಪ್ರತಿಕ್ರಿಯೆಗಳ ವೈವಿಧ್ಯ, ಅವರು ತಳೆಯುವ ಪರ್ಯಾಯ ದೃಷ್ಟಿಕೋನಗಳು ಶಿಕ್ಷಕ ಶಿಕ್ಷಕರ ಸ್ವಂತ ಅನುಭವವನ್ನು ಗಟ್ಟಿಮಾಡುವುದಲ್ಲದೇ ಅವರ ಬೋಧನಾ

ವಿಧಾನಕ್ಕೆ ವಿಶೇಷ ದಕ್ಷತೆಯನ್ನು ಒದಗಿಸುತ್ತದೆ. ತಮ್ಮಲ್ಲಿ ಒಡಮೂಡುವ ಅನೇಕ ಪ್ರಶ್ನೆಗಳಿಗೆ ನೇರ ಉತ್ತರಗಳಿರುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ಮನಗಾಣುತ್ತಾರೆ. ಅವರು ಇನ್ನೂ ಕಷ್ಟಪಟ್ಟು ಅಧ್ಯಯನ ಮಾಡಿ, ಬಾಲ್ಯವೆಂದರೆ ಏನು ಎಂಬ ವಿಚಾರದ ಬಗ್ಗೆ ಆಳವಾಗಿ ಚಿಂತಿಸಬೇಕಾಗುತ್ತದೆ.

ಕ್ಷೇತ್ರಾನುಭವಗಳ ಮೂಲಕ ಪೂರ್ವಕಲ್ಪನೆಗಳಿಗೆ ಸವಾಲೊಡ್ಡುವುದು

ಶಿಕ್ಷಣದ ಸ್ನಾತಕೋತ್ತರ ಪದವಿ ಕಾರ್ಯಕ್ರಮವು "ಮಗುವಿನ ಬೆಳವಣಿಗೆ ಮತ್ತು ಕಲಿಕೆ ವಿಷಯವಾಗಿ ಕೋರ್ಸ್ ಒಂದನ್ನು ನೀಡುತ್ತಿದ್ದು, ಅದರಲ್ಲಿ ಪ್ರಾಯೋಗಿಕ ಅನುಭವದ ಅಂಗವಾಗಿ ವಿದ್ಯಾರ್ಥಿಗಳು ಅನಾಥಾಲಯಗಳಿಗೆ, ಅಸಮರ್ಥರ ಕೇಂದ್ರಗಳಿಗೆ, ಬಾಲಾಪರಾಧಿಗಳ ಕೇಂದ್ರಗಳಿಗೆ, ನಗರಗಳ ಕೊಳೆಗೇರಿಗಳಿಗೆ ಮತ್ತು ಇದೇ ರೀತಿಯ ಇತರ ಕೇಂದ್ರಗಳಿಗೆ ಭೇಟಿ ನೀಡುತ್ತಾರೆ. ಇಂತಹ ಕೇಂದ್ರಗಳಲ್ಲಿ ಕಂಡುಬರುವ ಬಹುತೇಕ ಮಕ್ಕಳು ಸಮಾಜದ ನಿರ್ಲಕ್ಷಿತ ವರ್ಗಗಳಿಂದ ಬಂದವರಾಗಿದ್ದು, ಅವರು ತಮ್ಮ ಕುಟುಂಬಗಳಲ್ಲಿ ಶಾಲೆಗೆ ಹೋಗುತ್ತಿರುವ ಮೊದಲನೇ ಪೀಳಿಗೆಯ ಮಕ್ಕಳಾಗಿರುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ. ವಿದ್ಯಾರ್ಥಿಗಳು ಈ ಮಕ್ಕಳೊಂದಿಗೆ ಆಟ ಆಡುವುದು, ಅವರೊಡನೆ ಸಂವಾದಿಸುವುದು ಇವೇ ಮೊದಲಾದ ಚಟುವಟಿಕೆಗಳನ್ನು ಮಾಡುತ್ತಾರೆ. ಅವರ ದೈನಂದಿನ ಜೀವನವನ್ನು, ದಿನನಿತ್ಯದ ಕಾರ್ಯಕಲಾಪವನ್ನು, ಊಟದ ಅಭ್ಯಾಸಗಳನ್ನು, ಆಟಗಳನ್ನು, ಶಾಲಾಕಲಿಕೆಯಲ್ಲಿ ಅವರಿಗಿರುವ ಆಸಕ್ತಿಯನ್ನು ಕುರಿತು ಅರಿಯುತ್ತಾರೆ. ವಿದ್ಯಾರ್ಥಿಗಳು ಈ ವೀಕ್ಷಣೆಗಳನ್ನು ವಿಶ್ಲೇಷಿಸುವ ಮೂಲಕ ಮಗುವಿನ ಬೆಳವಣಿಗೆಯನ್ನು ಅರಿಯುತ್ತಾರೆ ಮತ್ತು ಈ ಅವಲೋಕನವನ್ನು ವಿಶ್ಲೇಷಿಸುತ್ತಾ ಸಿದ್ಧಾಂತಗಳನ್ನು ಕಲಿಯುತ್ತಾರೆ.

ಬಡತನದ ಸಮಾಜೋ–ಆರ್ಥಿಕ ಸನ್ನಿವೇಶದಲ್ಲಿ ಬದುಕುವ ಮಕ್ಕಳ "ಧ್ವನಿ"ಗಳನ್ನು ಕೇಳುವುದು ಮಕ್ಕಳು ಮತ್ತು ಬಾಲ್ಯದ ಬಗ್ಗೆ ಅವರು ಬಹಳ ಕಾಲದಿಂದ ಇಟ್ಟುಕೊಂಡು ಬಂದಿದ್ದ ನಂಬಿಕೆಗಳಿಗೆ ಸವಾಲನ್ನು ಒಡ್ಡುತ್ತದೆ. ಅವರು ಅಂತರಂಗ ಶೋಧನೆ ಮತ್ತು ವೈಚಾರಿಕ ಚಿಂತನೆಯಲ್ಲಿ ತೊಡಗುತ್ತಾರೆ. ಈ ಹೊಸ ಅರಿವಿನ ಮತ್ತು ಅವರ ಭಾವನಾತ್ಮಕ ತೊಳಲಾಟವು ಸಮ್ಮತಿ, ಅಸಮ್ಮತಿ ಹಾಗು ಆಂತರಿಕ ಒತ್ತಡಗಳಿಗೆ ಎಡೆ ಮಾಡಿಕೊಡುತ್ತದೆ.

ವಿದ್ಯಾರ್ಥಿಗಳು ತಮ್ಮ ನಂಬಿಕೆಗಳನ್ನು, ತರ್ಕರಹಿತವಾಗಿ ರೂಢಿಯಾದ ವಾದಗಳನ್ನು ತಡೆಹಿಡಿದು, ಇತರರ ದೃಷ್ಟಿಕೋನಗಳನ್ನು ಪರಿಗಣಿಸುವ ಅಗತ್ಯವನ್ನು ಮನಗಾಣುತ್ತಾರೆ. ಈ ಸಂವಾದಗಳು ಅಸ್ತಿತ್ವದಲ್ಲಿರುವ ದೃಷ್ಟಿಕೋನಗಳನ್ನು ತಮ್ಮ ಅನುಭವಗಳ ಬೆಳಕಿನಲ್ಲಿ ನೋಡುವ ಮತ್ತು ಅನುಭವಗಳನ್ನು ಪರಿಷ್ಕರಿಸುವ, ಹೆಚ್ಚು ದಕ್ಷವಾಗಿಸುವ ಅಥವಾ ಪರಿಶೀಲಿಸುವ ಮತ್ತು ಪುನಾರಚಿಸುವ ಪ್ರಕ್ರಿಯೆಗಳ ಮೂಲಕ ಮತ್ತೆ ಪರಿಗಣಿಸುವುದನ್ನು /ಪ್ರಶ್ನಿಸುವುದನ್ನು ಸುಗಮಗೊಳಿಸುತ್ತದೆ. ಇದರಿಂದ ಅವು ನೂತನ ಜ್ಞಾನದ ಮತ್ತು ವಿಭಿನ್ನ ಪರಿಕಲ್ಪನೆಗಳ ಹುಟ್ಟಿಗೆ ಕಾರಣವಾಗುತ್ತವೆ. ಬಹಳಷ್ಟು ಬಾರಿ, ಅವರು ಚಿಂತನಶೀಲ ಲೇಖನಗಳನ್ನು ಬರೆಯುತ್ತಾರೆ. ಓರ್ವ ವಿದ್ಯಾರ್ಥಿ, "ಅನಾಥಾಲಯಗಳಲ್ಲಿನ ಮಕ್ಕಳ ಮುಖದ ಮೇಲೆ ದುಮ್ಮಾನ ಮನೆಮಾಡಿರುತ್ತದೆ ಎಂದುಕೊಂಡಿದ್ದೆ. ಆದರೆ ಅವರು ಹಾಗಿರಲಿಲ್ಲ. ಅವರೆಲ್ಲಾ ಬಹಳ ಗೆಲುವಿನಿಂದಿದ್ದು, ಅವರು ನನ್ನಲ್ಲಿ ಹಲವು ಪ್ರಶ್ನೆಗಳನ್ನು ಕೇಳಿದರು. ಆ ಪ್ರಶ್ನೆಗಳಿಗೆ ನನ್ನ ಬಳಿ ಉತ್ತರವಿರಲಿಲ್ಲ" ಎಂದು ಬರೆದುಕೊಂಡಿದ್ದಾನೆ.

ಹೀಗೆ ಬಡ ಮಕ್ಕಳ ಸ್ಥಿತಿಗತಿಗಳು ಅವರ ವೈಯಕ್ತಿಕ ಗುಣಲಕ್ಷಣ–ಗಳಿಂದಾಗಲೀ, ಅವರ ಪೋಷಕರ ಅಜ್ಞಾನ ಅಥವಾ ಸಂತೃಪ್ತ ಭಾವನೆಯಿಂದಾಗಲೀ ರೂಪಿತವಾಗಿರುವುದಿಲ್ಲ ಎಂಬುದನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳುತ್ತಾರೆ. ಬೇರೊಂದು ರೀತಿಯಲ್ಲಿ ಹೇಳುವುದಾದರೆ, ವಿದ್ಯಾರ್ಥಿಗಳು ಶೋಷಿತ ವರ್ಗಗಳಿಂದ ಬರುವ ಈ ಮಕ್ಕಳ ಬಗ್ಗೆ ಸಮಾಜವು ಸಾಮಾನ್ಯವಾಗಿ ತಳೆಯುವ ಧೋರಣೆಯನ್ನು ಪ್ರಶ್ನಿಸುವಂತಾಗುತ್ತದೆ. ಬಾಲ್ಯವೆಂಬುದು ಕೇವಲ ಜೀವಶಾಸ್ತ್ರೀಯವಾಗಿ ರೂಪಿತವಾಗುವುದಲ್ಲ, ಅದು ಸಾಮಾಜಿಕ ಪರಿಸ್ಥಿತಿಯಿಂದಲೂ ರೂಪಿತವಾಗುವಂತಹುದು ಎಂಬುದನ್ನು ಅರಿಯುತ್ತಾರೆ.

ಸಮಾಜೋ–ಸಾಂಸ್ಕೃತಿಕ ಪದ್ಧತಿಗಳಿಂದ ಹಾಗೂ ಆರ್ಥಿಕ ಮುಗ್ಗಟ್ಟಿನಿಂದ ಅಡೆತಡೆ ಎದುರಿಸುತ್ತಿರುವ, ತಮ್ಮ ಕುಟುಂಬದಲ್ಲಿ ತಾವೇ ಮೊದಲು ಶಾಲೆಗೆ ಹೋಗುತ್ತಿರುವ ಅನೇಕ ಮಕ್ಕಳಿಗೆ ಅವರ ಶಾಲೆಯಲ್ಲಿ 'ಎಲ್ಲಾ ಮಕ್ಕಳೂ ಕಲಿಯುವ ಸಾಮರ್ಥ್ಯ ಹೊಂದಿರುತ್ತಾರೆ' ಎಂದು ದೃಢವಾಗಿ ನಂಬಿರುವ, ಅವರ ಬಗ್ಗೆ ಕಾಳಜಿ ತೋರುವ ಮತ್ತು ಅವರಿಗೆ ಬೆಂಬಲವಾಗಿ ನಿಲ್ಲುವ ವಯಸ್ಕರ ಅಗತ್ಯವಿರುತ್ತದೆ. ಶಾಲೆ, ಪಠ್ಯಕ್ರಮ, ಬೋಧನಾ ವಿಧಾನ ಹಾಗೂ ಮೌಲ್ಯ–ಮಾಪನಗಳನ್ನು ಸಂಘಟಿಸುವ ಮುಖ್ಯ ತತ್ತ್ವಗಳಲ್ಲಿ ಸಮನ್ವಯ ಶಿಕ್ಷಣ ಪರಿಕಲ್ಪನೆಯೂ ಒಂದು ಎಂಬುದನ್ನು "ಶಿಕ್ಷಕರ ತಯಾರಿ ಕಾರ್ಯಕ್ರಮ"ಗಳಲ್ಲಿ ಮುನ್ನೆಲೆಗೆ ತರಬೇಕಾದ ಅಗತ್ಯವಿದೆ. ಅವರ ಪಠ್ಯಕ್ರಮದಲ್ಲಿ ಓದಲು, ತರಗತಿಗಳಲ್ಲಿ ಚರ್ಚಿಸಲು ಹಾಗೂ ವಾಸ್ತವ ಅನುಭವಗಳನ್ನು ಪಡೆಯಲು ಸುದೀರ್ಘ ಅವಕಾಶಗಳನ್ನು ಕಲ್ಪಿಸಿ–ಕೊಡಬೇಕಾದ ಅಗತ್ಯವಿದೆ. ವಿದ್ಯಾರ್ಥಿಗಳು ಕ್ಷೇತ್ರ, ಪಠ್ಯ ಹಾಗೂ ತಮ್ಮ ನಡುವೆ ಸಂಬಂಧಗಳನ್ನು ಹೊಸೆಯಲು ದಾರಿತೋರಬಲ್ಲ ಬೋಧನಾ ಆಚರಣೆಗಳು ವಿದ್ಯಾರ್ಥಿಗಳಿಗೆ ಬಾಲ್ಯ, ಬೋಧನೆ ಮತ್ತು ಕಲಿಕೆಯ ಬಗ್ಗೆ ತಮ್ಮಲ್ಲಿರುವ ಅನಿಸಿಕೆ ಹಾಗೂ ಪೂರ್ವಕಲ್ಪನೆಗಳು ಸ್ವಯಂ ಜ್ಞಾನೋದಯದ ಹಂತಕ್ಕೆ ಏರುವಂತೆ ಮಾಡುವುದಷ್ಟೇ ಅಲ್ಲದೆ, ಅವರು ಸಮನ್ವಯ ಶಾಲಾ ವಾತಾವರಣ ಮತ್ತು ತರಗತಿ ಆಚರಣೆಗಳನ್ನು ಕಲ್ಪಿಸಿಕೊಳ್ಳಲು ನೆರವಾಗುತ್ತದೆ.

ಸುಮಾರು ಒಂದು ಶತಮಾನಕ್ಕೂ ಹಿಂದೆ ಜಾನ್ ಡೇವಿ ಅವರು "ಶಿಕ್ಷಣದಲ್ಲಿ ಸಿದ್ಧಾಂತಕ್ಕೂ ಆಚರಣೆಗೂ ಇರುವ ಸಂಬಂಧ" (The Relation of Theory to Practice in Education) ಎಂಬ ಪ್ರಬಂಧ ಬರೆದಿದ್ದಾರೆ. ಅದರಲ್ಲಿ ಅವರು ವಿದ್ಯಾರ್ಥಿಗಳು ಮತ್ತು ಅವರ ಚಿಂತನಕ್ರಮದ ಬಗ್ಗೆ ಶಿಕ್ಷಕರಲ್ಲಿ ಬೆಳೆಯುತ್ತಾ ಹೋಗುವ ಜ್ಞಾನದ ಕುರಿತು ತನ್ನ ಗಮನವನ್ನು ವಿಸ್ತೃತವಾಗಿ ಕೇಂದ್ರೀಕರಿಸಿದ್ದಾರೆ. ಇದನ್ನು ಅವರು "ಆತ್ಮಕ್ರಿಯೆಯೆಡೆಗಿನ ಒಳನೋಟ"ವೆಂದು ವರ್ಣಿಸಿ, ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಆಲೋಚನೆ, ಸ್ಪಂದನೆಗಳಿಗೆ ಶ್ರುತಿಗೊಂಡು, "ತಾನು ಇರುವ ರೀತಿ, ತನ್ನ ನಡೆ, ನುಡಿಗಳು ವಿದ್ಯಾರ್ಥಿಗಳ ನಡುವೆ ಯಾವ ಮನೋಧರ್ಮ ಮತ್ತು ಅಭ್ಯಾಸಗಳನ್ನು ಪೋಷಿಸುತ್ತವೆ ಅಥವಾ ನಿರುತ್ಸಾಹಗೊಳಿಸುತ್ತವೆ ಎಂಬುದನ್ನು ಗುರುತಿಸುವ ಸಾಮರ್ಥ್ಯ" ಎನ್ನುತ್ತಾರೆ.

ಮಕ್ಕಳನ್ನು ಅರಿಯುವ ಯಾವ ವಿಚಾರಗಳನ್ನು ಡೇವಿ ಪ್ರತಿಪಾದಿಸುತ್ತಾರೋ ಅವುಗಳೊಂದಿಗೆ ಹೊಂದಾಣಿಕೆಯಾಗುವ ರೀತಿಗಳಲ್ಲಿ ಶಿಕ್ಷಕರ ಪ್ರಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಂದಿಗೆ

ಒಡನಾಡಲು ಪ್ರಯತ್ನಿಸಬಲ್ಲರೇ? ಎಂದು ಕೇಳುವುದು ಇಲ್ಲಿ ಪ್ರಸ್ತುತವಾಗಬಹುದು. ಸಮನ್ವಯ ಸಮಾಜಕ್ಕಾಗಿ ಸಕ್ಷಮರಾದ, ಕಾಳಜಿ ತೋರುವ ಶಿಕ್ಷಕರನ್ನು ತಯಾರುಮಾಡಲು ನಾವು ಡೇವಿಯ ಸಲಹೆಗಳನ್ನು ಪರಿಗಣಿಸಬೇಕಿದ್ದು, ನಮ್ಮ ಬೋಧನಾ ಆಚರಣೆಗಳ ಮೂಲಕ ಆತ್ಮಕ್ರಿಯೆಗೆ ತೊಡಗಬೇಕಾಗಿದೆ.

ಉಲ್ಲೇಖಗಳು

Azim Premji University (2019).

https://practiceconnect.azimpremjiuniversity.edu.in/category/practice-insights/teachers-for-inclusive-society/

Batra (2015) Quality of Education and the Poor: Constraints on Learning. TRG Poverty and Education. Working paper series. (p1-14) Max Weber Stiffing

Feiman-Nemser, S., & Buchmann, M. (1986). The first year of teacher preparation: Transition to pedagogical thinking? Journal of Curriculum Studies, 18(3), 239-256.

Giridhar, S (2020). Ordinary People, Extraordinary teachers: The heroes of real India. Westland Publications Private Company: Chennai

---



ರಾಜಶ್ರೀ ಶ್ರೀನಿವಾಸನ್ ಅವರು ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿದ್ದಾರೆ. 'ಶಿಕ್ಷಕರ ಶಿಕ್ಷಣ ಮತ್ತು ಮಗುವಿನ ಬೆಳವಣಿಗೆ ಅವರ' ಆಸಕ್ತಿಯ ಕ್ಷೇತ್ರಗಳಾಗಿವೆ. ಅವರನ್ನು ಸಂಪರ್ಕಿಸಬಹುದಾದ ಮಿಂಚಂಚೆ ವಿಳಾಸ: rajashree@apu.edu.in

ಅನುವಾದ: **ಕುಶಾಲ್ ಬಿ ಎಸ್** । ಪರಿಶೀಲನೆ: **ಜೈಕುಮಾರ್ ಮರಿಯಪ್ಪ**